ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಆಫೀಸಿನಿಂದ.

ತಾರೀಖು 2ನೆ ಅಕ್ಟೋಬರು 1909.

ಇದರಿಂದ ಸರ್ವಸ್ಥ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗ್ರೌಂಟಿನಿಂದ ಸಾದರಾದ 29—6—1901ನ ನಂ ಕ್ರಂ 17691-L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್‌ಟೆಂಷನ್‌ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನು 1909ನೆ ಇಸವಿ ಅಕ್ಟೋಬರು ತಾರೀಖು 11 ಮತ್ತು 12 ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಸದರಿತ್ತಾಗಿ ಹರಾಜಿನಲ್ಲಿ ಛಡ್ ಸವಾಲು ಮೂಲಕ ಪಡೆದು ಕೊಳ್ಳಲು ಇಷ್ಟಪುಳ್ಳವರ್ಯಾರಿಗಾದರೂ ಅದೇ ತಾರೀಖು ಪ್ರಾತಃಕಾಲ 8 ಘಂಟೆ ಲಾಗಾಯಿತು ಆಯಾಯ ಸೈಟುಗಳ ಒಳ ಹಾಜರಾದ್ದು ಛಡ್ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಛಡ್ ಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರ್ತಿಸದೆ ನಿಲ್ಲುವ ಸೈಟುಗಳನ್ನು ಮರು ದಿವಸಗಳಲ್ಲಿ ಅದೇ ಟೈಮ್‌ನಲ್ಲಿ ಹರಾಜು ಮಾಡಿಸಲ್ಪಡುತ್ತೆ.

	ಬಸವನಗುಡಿ ಎಕ್ಸ್‌ಟೆಂಷನ್.			
4ನೆ ಬ್ಲಾಕ್	... 23	...	...	
,,	... 87	...	...	
,,	... 89	...	...	
,,	... 90	...	...	
,,	... 91	...	...	100 × 30
,,	... 100	...	...	
,,	... 136	...	...	
,,	... 137	...	...	
,,	... 138	...	...	
	ಮಲ್ಲೇಶ್ವರ ಎಕ್ಸ್‌ಟೆಂಷನ್.			
ಹಿಂದೂ ಬ್ಲಾಕ್	... 521	...	...	
,,	... 525	...	...	150 × 30
,,	... 526	...	...	
,,	... 349	...	...	
,,	... 350	...	...	
,,	... 357	...	...	
,,	... 358	...	...	100 × 30
,,	... 434	...	...	
,,	... 435	...	...	
,,	... 436	...	...	
,,	... 57	...	...	
ಸಂಪಿಗೆ ರಸ್ತೆ	... 282	...	...	
,,	... 283	...	...	120 × 30
,,	... 284	...	...	
,,	... 285	...	...	
ಮಹಮ್ಮದೀಯರ ಬ್ಲಾಕ್	... 146	...	...	
,,	... 187	...	...	
,,	... 188	...	...	
,,	... 189	...	...	100 × 30
,,	... 190	...	...	
,,	... 169	...	...	
ಕಾಟೇಜ್ ಸೈಟ್	... 29	...	...	150 × 187
,,	... 113–114	...	...	214 × 160
ಬ್ರಾಹ್ಮಣರಬ್ಲಾಕ್ ಮನೆಸೈಟ್	309–310–311–312	...	...	100 × 30

1. ಹರಾಜು ಶುರುವಾದ ಕೂಡ್ಲೆ ಛಡ್ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡ್ ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ಸಿಲ್ಲುವ ಮೊಬಲಗಂದರೆ ಛಡ್‌ಸವಾಲ್ ಮೊಬಲಗ್ಗೆ ಭರ್ತಿಯಾಗಿ ಕೂಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್‌ಸವಾಲ್‌ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ತೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನ ಛಡ್‌ಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಮೂರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕ ದ್ದಕ್ಕಾಗಿ ಯಾವಾಗಲೂ ಬಿಟ್ಟುರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ಮೈಸೂರಿನ ಸ್ಯಾನಿಟೆರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮೊಳಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಕೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಗೆ ಕಕ್ಕಸು ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೊಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡುವ ರೀತಿಯು ಳ್ಳಿರತಕ್ಕದ್ದು.

8. ಬಂದು ಮತ್ತ ಪಣ ಅಥವಾ ಜಾತಿಯವರಿಗೆ ವಿಭಜಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸರ್ವಸ್ಥ ಜನಗಳ ಬರಹ ಮೂಲಕವಾದ ಒಪ್ಪಿಕೆಯ ಮೇಲೆ ಡಿಪ್ಯೂಟಿ ಕಮಿಷ್ಣರನರು ಮಂಜೂರ್ಮಾಡಿದ ಹೊರ್ತು ಇತರ ಮತ್ತ ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟುರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪು ನಡದಲ್ಲಿ ಕೊಡಲ್ಪಟ್ಟರುವ ನಿವೇಶನವನ್ನ ಹಿಡುವ್ಯೇದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪು ನಡದವ್ಯಕ್ತೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಕೀರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ಏಥವಾದ ಪರಿಹಾರ ದ್ರವ್ಯಕ್ಕಾ ಯಾ ಕಟ್ಟಡ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರರಾಗುವದಿಲ್ಲ.

ಎಸ್. ಸುಬ್ಬರಾವ್, ವೈಸ್ ಪ್ರೆಸಿಡೆಂಟ್.